


ಬ್ರಹ್ಮನಲ್ಲಿ ಕೋರಿ ತುಂಬಿಕೊಂಡು ತರುತ್ತಾರೆಯೇ? ಹಾಗಾದರೆ ರೂಪ ಎಂದರೇನು? ಅವನಿಗಿದ್ದ ರೂಪವಾದರೂ ಏನು? ಗಂಟುಗಂಟುಗಳಿದ್ದ ಕಪ್ಪು ಮೈ! ಮಾಂಸಪರ್ವತವೇ ಎನ್ನುವಂತಿದ್ದ ಅಕರಾಳ ವಿಕರಾಳ ಶರೀರ. ವಲ್ಲೆ ಎನ್ನುವಂಥ ಐಬು ತನ್ನಲ್ಲಾದರೂ ಏನಿತ್ತು. ಇಡೀ ರಾತ್ರಿ ಅವನ ಸಣ್ಣಧ್ವನಿಯ ಮಾತುಗಳು. ಮನದ ಮೇಲೆ ಭಯಂಕರ ಪರಿಣಾಮ ಬೀರುತ್ತಿದ್ದ ಮಾತುಗಳು. ಎದ್ದು ಅವನ ತಲೆಯ ಮೇಲೆ ಗುಂಡುಕಲ್ಲು ಹಾಕಿಬಿಡಬೇಕೆನ್ನಿಸುತ್ತಿತ್ತು. ಹೊರಬಂದು ಅವ್ವನನ್ನು ಸೀಳಿ ಬಿಡಬೇಕೆನ್ನಿಸುತ್ತಿತ್ತು. ಆದರೂ ತಾಳಿದಳು... ಬಾಳಿದಳು. ಆದರೂ ಪ್ರಯೋಜನವಿಲ್ಲ. ಸದ್ಯ ಮೃತ್ಯುವಿನ ನಿರ್ಗಮನದಲ್ಲಿ ಅವಳ ಬದುಕು ಹುಟ್ಟಿಕೊಂಡಿತ್ತು. ಉಳಿದುಕೊಂಡಿತ್ತು.

ಮೂರು ತಿಂಗಳುಗಳ ರಾತ್ರಿಯ ಮಾತುಗಳು ನಿಂತಿದ್ದವು. ಅವನ ನಿರ್ಗಮನದಲ್ಲಿ ನೆಮ್ಮದಿಕಂಡಳು ಗೌರಿ. ಮೃತ್ಯುವಿಗಾಗಿ ಅವಳೆಂದೂ ಒಂದು ಹನಿ ಕಣ್ಣೀರು ಉದುರಿಸಲಿಲ್ಲ. ಮುಗಿದೇಹೋದ ಸಂಬಂಧವೆಂದುಕೊಂಡರೆ ಮೃತ್ಯೂವೀಗ ಹೆಣವಾಗಿಯೂ ಕಾಡಲು ಬಂದನೇ? ಅವನ 'ವಪ್ಪ'ವೂ ಒಂದು ಚರ್ಚಿತ ವಿಷಯವೇ? ಆ ಚರ್ಚೆ ತಮ್ಮೆದುರೇ ನಡೆಯಬೇಕೆ?

"ಚಂದಾ ಎತ್ತುತ್ತಾರಂತೆ" ಆ ಎರಡು ವಾಕ್ಯಗಳು ಕಿವಿಗೆ ಬೀಳುತ್ತಿದ್ದಂತೆಯೇ ವಿಕ್ಷಿಪ್ತತೆಯಲ್ಲಿ ಮುಳುಗಿದ್ದ ಗೌರಿ ಬೆಚ್ಚಿ ಬಿದ್ದಿದ್ದಳು. "ಇನ್ನೇನು ಮಾಡಾದವ್ವ ಗೌರಿ. ಅವನ ಹೆಣಾನಾ ಅನಾಥ ಮಾಡಕ್ಕಾದಾತಾ?" ಊರ ಹಿರಿಯರು ಸಮಜಾಯಿಷಿ ಕೊಟ್ಟಿದ್ದರು. ಅದು ಅವನಲ್ಲ. ಅದು ಅವನ ಹೆಣ. ಅದು ಮೃತ್ಯುವಲ್ಲ, ಮೃತ್ಯುವಿನ ಹೆಣ. ಹೆಣಕ್ಕೆ ನಾಲಿಗೆ, ನಂಜುಗಳ ನೆಂಟಸ್ತಿಕೆ ಎಲ್ಲಿಂದ ಬರಬೇಕು. ದಿಟ ಆ ಹೆಣ ಕಾಡು ಹೆಣವಾಗಬಾರದು, ಆ ಹೆಣ ಅನಾಥವಾಗಬಾರದು. ಗೌರಿಯ ತಲೆಯಲ್ಲಿ ಬೆಳಕು ಹೊತ್ತಿಕೊಂಡಿತ್ತು. ಅದರೊಡನೆ ತನಗೂ ತನ್ನವ್ವನಿಗೂ ಸಂಬಂಧವಿತ್ತೆಂದು ಎಲ್ಲರೂ ಅನ್ನುತ್ತಿದ್ದಾರೆ. ಆ ಸಂಬಂಧಕ್ಕೊಂದು ಗೌರವ ಬದುಕಿರುವ ತಾವಾದರೂ ಕೊಡಲೇ ಬೇಕಲ್ಲವೆ?

ಗೌರಿ ಎದ್ದು ಹೊರಬಂದಿದ್ದಳು. ಕಾರಲ್ಲಿ ಬಂದಿದ್ದ ಮೂವರೂ ಜಗಲಿ ಮೇಲೆ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದರು. ಗೌರಿ ಅವರ ಕೈಗೆ ವಂದಷ್ಟು ಹಣ ತುರುಕಿದ್ದಳು. ''ಹೆಣ ತರಾಕೆ ವ್ಯವಸ್ಥೆ ಮಾಡಿ." ಅದೇ ತಾನೇ ಕೋಣೆಯ ಕದ ತೆರೆದು ಹೊರಬರುತ್ತಿದ್ದ ಪಾರೋತವ್ವ ಆ ಮಾತುಗಳ ಕೇಳುತ್ತಿದ್ದಂತೆ 'ಗೌರಾ' ಎಂದು ಮಗಳನ್ನಪ್ಪಿ ಭೋರಾಡಿ ಅಳತೊಡಗಿದ್ದಳು.

### ಎಂ.ಎಸ್. ವೇದಾ

ಕವಿತೆ, ಕತೆ, ಕಾದಂಬರಿ, ನಾಟಕಗಳು ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಬರೆದಿರುವ ವೇದಾ ಪ್ರಯೋಗಶೀಲ ಲೇಖಕಿ. ಲೇಖಕ ಬಿ. ಪುಟ್ಟಸ್ವಾಮಯ್ಯ ಅವರ ನಾಟಕ ಹಾಗೂ ಕಾದಂಬರಿಗಳ ಕುರಿತು ಪಿಎಚ್.ಡಿ. ಮಾಡಿದ್ದಾರೆ. 'ಪ್ರೀತಿ ಮತ್ತು ಸಾವು', 'ಪಾಲು', 'ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ', 'ಮುಳ್ಳ ಮನೆಯ ಮೇಲೆ' ಅವರ ಕಥಾಸಂಕಲನಗಳು. 'ಜಮೀನು', 'ಜಯ', 'ಕಪ್ಪು ಕಿವಿಯ ಬಿಳಿಯ ಕುದುರೆಗಳು', 'ರಾಜ ಒಡೆಯರ್' ಕಾದಂಬರಿಗಳು. 'ಕಾವ್ಯಕೂಸು', 'ಗಂಗೋತ್ರಿಯಲ್ಲಿ', 'ಬಿಳಲುಗಳು', 'ದಾಖಲಾಗುವುದು ಬೇಡ' ಕವಿತೆಗಳ ಸಂಕಲನಗಳನ್ನು ಮತ್ತು 'ಉತ್ತರ ಶಾಕುಂತಲಾ' ನಾಟಕವನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕಿ.